ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು:

ಪಾಟೀ ಸವಾಲು ಶ್ರೀ ಎಂ ಎಲ್ ವಿ ಎದುರುದಾರ ಪರ ವಕೀಲರಿಂದಃ

ನಾನು ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಭ್ಯಾಸಮಾಡಿದ್ದೇನೆ. ನಾನು ರಾಜಕೀಯ ರಂಗದಲ್ಲಿ ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ ಎಂದರೆ ನಿಜ. ನಾನು ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದೇನೆ. ನಾನು ಪಂಚಾಯಿತಿಯಲ್ಲಿ ಹಾಲಿ ಸದಸ್ಯ ಎಂದರೆ ನಿಜ. ನಾನು ಬಿಳಗುಂಬ ಪಂಚಾಯಿತಿಯಲ್ಲಿ ಹಿಂದೆ ಅಧ್ಯಕ್ಷ ಸಹ ಆಗಿದ್ದೆ ಎಂದರೆ ನಿಜ. ನಾನು 1ವರೆ ವರ್ಷಗಳ ಕಾಲ ಅಧ್ಯಕ್ಷ ಆಗಿದ್ದೆ. ನಾನು ಪಾರ್ಟಿಯಾಗಿದ್ದ ಅಸಲು ದಾವೆ ಮತ್ತು ಜಾರಿ ಅರ್ಜಿಯಲ್ಲಿ ನನ್ನ ಪರ ಇದ್ದಂತಹ ವಕೀಲರು ನಮ್ಮ ಗ್ರಾಮದವರು ಮತ್ತು ಅವರ ಬಾಲ್ಯ ಸಹ ನಮ್ಮ ಗ್ರಾಮದಲ್ಲೆ ಆಗಿತ್ತು ಎಂದರೆ ನಿಜ. ನಮ್ಮ ಮನೆಗೂ ಮತ್ತು ಆ ವಕೀಲರ ಮನೆಗೂ ಬಿಳಗುಂಬದಲ್ಲಿ 20 ಮನೆ ಅಂತರ ಇದೆ. ಅವರು ಬಿಳಗುಂಬದಲ್ಲಿ ಜಮೀನು ಹೊಂದಿದ್ದು ಅಲ್ಲಿಗೆ ಬಂದು ಹೋಗುತ್ತಿರುತ್ತಾರೆ ಎಂದರೆ ನಿಜ, ಅವರು ಈ ಹಿಂದೆ ನನಗೆ ಸಂಬಂಧಿಸಿದ ಕ್ರಿಮಿನಲ್ ಕೇಸುಗಳನ್ನು ಸಹ ನಡೆಸುತ್ತಿದ್ದರು ಎಂದರೆ ನಿಜ. ಆ ಕೇಸು ರಾಜಿ ಆಗಿತ್ತು ಎಂದರೆ ನಿಜ. ಪಂಚಾಯಿತಿಗೆ ಸಂಬಂಧಪಟ್ಟಂತೆ ಇರುವಂತಹ ಕಾನೂನಿನ ಬಗ್ಗೆ ನನಗೆ ಗೊತ್ತಿದೆ. ಸಿವಿಲ್ ದಾವೆ ಇದ್ದಾಗ ಪ್ರತಿವಾದಿ ತಕರಾರು ಹಾಕುವ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಹಿಂದಿನ ವಕೀಲರು ದೂರದ ಸಂಬಂಧಿಕರು. ನಾನು ಹಿಂದಿನ ವಕೀಲರನ್ನು ಅವರು ನಮ್ಮ ಗ್ರಾಮದವರೇ ಮತ್ತು ಪ್ರಾಮಾಣೀಕರು ಅಂತ ನೇಮಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ಗ್ರಾಮದವರು ಅಂತ ನೇಮಿಸಿಕೊಂಡಿದ್ದೆ ಎನ್ನುತ್ತಾರೆ. ಈ ಹಿಂದಿನ ವಕೀಲರು ಈ ಪ್ರಕಾರ ಬೇರೆ ಪಾರ್ಟಿಗಳಿಗೂ ಅಥವಾ ಬೇರು ಕೇಸುಗಳಲ್ಲಿ ಮಾಡಿದ್ದಾರೋ ಏನೋ ನಾನು ವಿಚಾರಿಸಿಕೊಂಡಿಲ್ಲ. ನನ್ನ

ಹಿಂದಿನ ವಕೀಲರು ಪ್ರಾಮಾಣೀಕ ವಕೀಲರು ಎನ್ನುವುದು ಮತ್ತು ಅವರ ವಿರುದ್ಧ ಯಾವುದೇ ದೂರು ಬಾರ್ ಕೌನ್ಸಿಲ್‌ಗೆ ಯಾರು ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ತೊಂದರೆ ಆಗಿದೆ ನಾನು ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. 21.06.2004ರ ಹಿಂದೆ ನನ್ನ ಮತ್ತು ಪ್ರತ್ಯೇರ್ಜಿದಾರರ ನಡುವೆ ಅಗ್ರಿಮೆಂಟ್ ವ್ಯವಹಾರ ಆಗಿತ್ತು ಅಂತ ಹೇಳಿದ್ದು ಅದು ಕೇವಲ ಹಣದ ವ್ಯವಹಾರ ಅಂತ ಆಧಾರ ಪತ್ರ ಬರೆಸಿಕೊಳ್ಳಬಹುದಾಗಿತ್ತಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಆಧಾರ ಪತ್ರ ಏನೂ ಅಂತ ಗೊತ್ತಾಗಲಿಲ್ಲ ಎನ್ನುತ್ತಾರೆ. ಪತ್ರ ಬರೆಸುವಾಗ ನಾನು ವಕೀಲರಿಂದ ಮಾಹಿತಿ ಪಡೆದುಕೊಳ್ಳಬಹುದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಾಗಲಿಲ್ಲ ಮತ್ತು ಪ್ರತ್ಯೇರ್ಜಿದಾರರು ನನ್ನ ಪಕ್ಕದ ಮನೆಯವರು ಆಗಿದ್ದ ಕಾರಣ ಬರೆಸಿಕೊಳ್ಳಲಿಲ್ಲ ಎನ್ನುತ್ತಾರೆ. ನಾವು ಕರಾರು ಪತ್ರ ಬರೆಸಿಕೊಳ್ಳಲು ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿದ್ದೆವು. ಆಗ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಪತ್ರ ನೋಂದಣಿ ವೇಳೆಗೆ ಒಕ್ಕಣೆಯನ್ನು ನಮಗೆ ಓದಿ ತಿಳಿಸಿದ್ದಾರೆ ಎಂದು ಹೇಳಿದರೆ ಸರಿಯಲ್ಲ. ಆ ಪತ್ರದಲ್ಲಿ ಬರವಣಿಗೆ ವೇಳೆ 8 ಲಕ್ಷ ಮತ್ತು ನೋಂದಣಿ ವೇಳೆ 4 ಲಕ್ಷ ಅಂದರೆ ಒಟ್ಟು 12 ಲಕ್ಷ ನಾನು ಅವರಿಂದ ಪಡೆದುಕೊಂಡಿದ್ದೇನೆ ಅಂತ ನಮೂದಾಗಿದೆ ಎಂದರೆ ಸಾಕ್ಷಿ ನಾನು ಕೇವಲ 8 ಲಕ್ಷ ಮಾತ್ರ ಪಡೆದುಕೊಂಡಿದ್ದೆ ಮತ್ತು 26 ತಿಂಗಳ ನಂತರ ನಾನು ಅವರಿಗೆ 12 ಲಕ್ಷ ಕೊಡಬೇಕಾಗಿತ್ತು ಎನ್ನುತ್ತಾರೆ. ಕ್ರಯದ ಮೊಬಲಗೂ 12 ಲಕ್ಷ 75 ಸಾವಿರಕ್ಕೆ ತೀರ್ಮಾನ ಆಗಿತ್ತು ಎನ್ನುವುದು ಮತ್ತು ನಾನು ಬಾಕಿ ಹಣ 75 ಸಾವಿರವನ್ನು ಪತ್ರ ನೋಂದಣಿ ಆಗುವ ಕಾಲಕ್ಕೆ 26 ತಿಂಗಳ ಒಳಗಾಗಿ ಕೊಡಬೇಕು ಅಂತ ತೀರ್ಮಾನ ಆಗಿತ್ತು ಹಾಗೂ ಪತ್ರ ನೋಂದಣಿ ಮಾಡಿಸಿಕೊಡುತ್ತೇವೆ ಅಂತ ಒಪ್ಪಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತ್ಯೇರ್ಜಿದಾರರ ನಡುವೆ ಆದ ಅಗ್ರಿಮೆಂಟ್ ಜಮೀನಿನ ಕರಾರು ಎಂದರೆ ಸಾಕ್ಷಿ ಇಲ್ಲ ಬಡ್ಡಿ ವ್ಯವಹಾರದ ಕರಾರೂ ಎನ್ನುತ್ತಾರೆ. ಆ ಸಂಬಂಧ ಪ್ರತ್ಯೇರ್ಜಿದಾರರ ನೋಂದಣಿ ಪತ್ತ ಬರೆದುಕೊಡಿ ಅಂತ ವಕೀಲರ ಮೂಲಕ ನೋಟಿಸ್ ನನಗೆ ಬಂದಿದೆ ಎಂದರೆ ನಿಜ. ನಾನು ಆ ನೋಟಿಸ್‌ನ್ನು ನಮ್ಮ ವಕೀಲರಾದ ಧನಂಜಯ್ಯ ಇವರಿಗೆ ಕೊಟ್ಟಿದ್ದೆ. ಆಗ ಅವರು

ನೋಡುತ್ತೇನೆ ಹೋಗಿ ಅಂತ ಹೇಳಿದ್ದರು. ಆಗ ಆ ನೋಟಿಸ್‌ಗೆ ಉತ್ತರ ಕೊಡವುದು ಬೇಡ 2 ತಿಂಗಳು ನಂತರ ನೋಡೋಣ ಅಂತ ನಮ್ಮ ವಕೀಲರು ನನಗೆ ಹೇಳಿದ್ದರು. ಪ್ರತ್ಯೇರ್ಜಿದಾರರು ಮತ್ತು ನಾನು ಒಂದೇ ಊರಿನವರು ಆದ ಕಾರಣ ಅವರ ಜೊತೆ ಮಾತನಾಡೋಣ ಅಂತ ನಮ್ಮ ವಕೀಲರು ಹೇಳಿದ್ದರು. ನಮ್ಮ ವಕೀಲರು ಪ್ರತ್ಯೇರ್ಜಿದಾರರ ಜೊತೆ ಮಾತನಾಡಿದ್ದೇನೆ ಅವರ ದುಡ್ಡು ಅವರಿಗೆ ಕೊಡಿ ಅಂತ ಹೇಳಿದ್ದರು ಎನ್ನುತ್ತಾರೆ. ನಾನು ಹಣವನ್ನು ಪ್ರತ್ಯೇರ್ಜಿದಾರಿಗೆ 10 ಲಕ್ಷ ಕೊಡಲು ಹೋಗಿದ್ದೆ. ಆಗ ಅವರು ನಮಗೆ ಕೊಡಬೇಕಾದ ಪೂರ್ತಿ 12 ಲಕ್ಷ ಕೊಡಿ ಅಂತ ಹೇಳಿದ್ದರು. ನಾನು ಒಬ್ಬನೇ ಹಣವನ್ನು ಕೊಡಲು ಹೋಗಿದ್ದೆ. ಸಾಕ್ಷಿದಾರು ಇರಲಿಲ್ಲ. ನಾನು ಪ್ರತ್ಯೇರ್ಜಿದಾರರನ್ನು ಸಂಪರ್ಕಿಸಿಲ್ಲ ಎನ್ನುವುದು ಮತ್ತು ನಮ್ಮ ವಕೀಲರಿಗೆ ನೋಟಿಸ್‌ಗೆ ಉತ್ತರ ಕೊಡಲು ಮಾಹಿತಿ ಸಹ ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ.)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.